# <u>ಪ್ರಚಾರ ದಿನಚರಿ–28 ಏಪ್ರಿಲ್ 2014</u>

**ಅರುಣ್ ಜೇಟ್ಲಿ**
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ನರೇಂದ್ರ ಮೋದಿ ಅವರಿಗೆ ಮತ ಹಾಕುವವರು ಸಮುದ್ರದಲ್ಲಿ ಮುಳುಗುತ್ತಾರೆ ಎಂಬ ಡಾ.ಫಾರೂಕ್ ಅಬ್ದುಲ್ಲಾ ಅವರ ಹೇಳಿಕೆ ಖಂಡನಾರ್ಹವಾಗಿದೆ. ಬಹುಸಂಖ್ಯಾತರ ಅಭಿಪ್ರಾಯದ ಕುರಿತು ಡಾ.ಅಬ್ದುಲ್ಲಾ ಹೊಂದಿರುವ ತಾತ್ಸಾರವನ್ನು ಈ ಹೇಳಿಕೆ ಪ್ರತಿಬಿಂಬಿಸುತ್ತದೆ. ಭಾರತ ಜಾತ್ಯಾತೀತ ರಾಷ್ಟ್ರವಾಗಿದ್ದು ಕೋಮುವಾದದ ರಾಜಕಾರಣವನ್ನು ಕದಾಪಿ ಒಪ್ಪುವುದಿಲ್ಲವೆಂದು ಫಾರೂಖ್ ನಂಬಿರುವುದು ಸರಿಯಾಗಿದೆ.

ಭಾರತದ ಜಾತ್ಯಾತೀತತೆಯಲ್ಲಿ ಕಾಣುವ ಏಕೈಕ ಬಹು ದೊಡ್ಡ ವೈಫಲ್ಯ ಯಾವುದು? ದೇಶದ ವಿವಿಧ ಭಾಗಗಳಲ್ಲಿ ಘರ್ಷಣೆಗಳು ಹಾಗೂ ದುರಾದೃಷ್ಟಕರ ಘಟನೆಗಳು ಘಟಿಸಿವೆ. ಆದರೂ ಕೂಡ ಭಾರತೀಯ ಸಮಾಜ ಸಹಿಷ್ಣುತೆ ಪ್ರದರ್ಶಿಸಿದ್ದು ಬಿಕ್ಕಟ್ಟಿನಿಂದ ತಕ್ಷಣವೆ ಹೊರಬಂದು ಸಾಮಾನ್ಯ ಜೀವನದತ್ತ ಮರಳುತ್ತದೆ. ಭಾರತದ ಜಾತ್ಯಾತೀತತೆಯ ಬಹು ದೊಡ್ಡ ವೈಫಲ್ಯವನ್ನು ಫಾರೂಖ್ ಸಾಹೀಬರ ರಾಜ್ಯ ಕಾಶ್ಮೀರದಲ್ಲಿ ಕಾಣಬಹುದು. ಒಂದು ಸಮುದಾಯದ ಪಲಾಯನಕ್ಕೆ ಕಾರಣವಾದ ಅಂದರೆ ಕಾಶ್ಮೀರಿ ಪಂಡಿತರ ವಿರುದ್ಧ ನಡೆದ ಮತೀಯ ದಂಗೆಗೆ ಸಾಕ್ಷಿಯಾದ ಭಾರತದ ಏಕೈಕ ರಾಜ್ಯವೆಂದರೆ ಅದು ಕಾಶ್ಮೀರ. ಭಾರತ ಎಂದಿಗೂ ಕೋಮುವಾದದ ರಾಜಕಾರಣವನ್ನು ಒಪ್ಪಲಾರದು. ಕೋಮುವಾದದ ರಾಜಕಾರಣವನ್ನು ಕಾಶ್ಮೀರ ಒಪ್ಪುವುದಿಲ್ಲವೆಂದು ಫಾರೂಖ್ ಸಾಹೇಬರು ಹೇಳಿದರೆ ನನಗೆ ಸಂತಸವಾಗುತ್ತದೆ. ಕಾಶ್ಮೀರಿ ಪಂಡಿತರ ಪುನರ್ವಸತಿಗೆ ಕಾಶ್ಮೀರ ಕೆಂಪು ರತ್ನಕಂಬಳಿ ಹಾಸುವುದೆ?

ನರೇಂದ್ರ ಮೋದಿ ಪ್ರಧಾನಿಯಾಗಲು ಭಾರತ ಮತಹಾಕಲಿದೆ. ಯಾರೇ ಆಗಲಿ ಸಮುದ್ರಕ್ಕೆ ಹಾರುವ ಅಗತ್ಯವಿಲ್ಲ. ಆದರೂ, ಕಾಶ್ಮೀರಿ ಪಂಡಿತರು ತಮ್ಮ ತವರೂರಿಗೆ ಮರಳಲು ಅಸಾಧ್ಯವಾದ ಪರಿಸ್ಥಿತಿಗೆ ಮೂಕ ಸಾಕ್ಷಿಯಾಗಿರುವ ಫಾರೂಖ್ ಸಾಹೇಬರು ಪಶ್ಚಾತಾಪ ಪರಿಹಾರಕ್ಕಾಗಿ ಕಡೆ ಪಕ್ಷ ದಾಲ್ ಸರೋವರದಲ್ಲಿ ಮುಳಗೇಳಲಿ.

<u>ಶ್ರೀಮತಿ ವಾದ್ರಾ ಅವರ ಪದಬಳಕೆ</u>

ತಾವು ಯಾರಿಗೂ ಅಂಜುವುದಿಲ್ಲವೆಂದು ಶ್ರೀಮತಿ ವಾದ್ರಾ ಪ್ರಕಟಿಸಿದ್ದಾರೆ. ಭಾಜಪವನ್ನು ಅವರು "ಭಯಗ್ರಸ್ತ ಇಲಿ"ಗೆ ಹೋಲಿಸಿದ್ದಾರೆ.

ಚುನಾವಣೆಗಳಲ್ಲಿ ತಮ್ಮ ಅಭ್ಯರ್ಥಿಗಳಿಗೆ ನೆರವಾಗುವುದು ಕುಟುಂಬ ಸದಸ್ಯರ ಕರ್ತವ್ಯ. ಅಭ್ಯರ್ಥಿ ಅನ್ಯ ಹಲವಾರು ಸಿದ್ಧತೆಗಳಲ್ಲಿ ವ್ಯಸ್ಥನಾಗಿರುತ್ತಾನೆ. ಚುನಾವಣಾ ಕಚೇರಿ ಅಥವಾ ಪ್ರಚಾರ ಕ್ಷೇತ್ರಗಳಿಗೆ ತಲುಪಲು ಅಸಾಧ್ಯವಾದೆಡೆ ಅಭ್ಯರ್ಥಿಯ ಅನುಪಸ್ಥಿತಿಯನ್ನು ತುಂಬುವ ಕೆಲಸವನ್ನು ಕುಟುಂಬ ಸದಸ್ಯರು ಮಾಡುವುದುಂಟು. ಅತಿ ವಿನಯದೊಂದಿಗೆ ರಾಜಕೀಯ ಕಾರ್ಯಕರ್ತರೊಂದಿಗೆ ವ್ಯವಹರಿಸುವಂತೆ ಹಾಗೂ ಅವರ ಮೇಲೆ ಒತ್ತಡ ಹೇರದಂತೆ ಕುಟುಂಬ ಸದಸ್ಯರಿಗೆ ಸೂಚಿಸಲಾಗುತ್ತದೆ. ರಾಜಕೀಯ ಎದುರಾಳಿಯ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡದಂತೆಯೂ ಅವರಿಗೆ ತಿಳಿಸಲಾಗುತ್ತದೆ.

ತಮ್ಮ ಟೀಕೆಗಳಿಂದ ಡಾ.ವಾದ್ರಾ ರಾಜಕೀಯ ಸಮಾಲೋಚನೆಯ ಗುಣಮಟ್ಟವನ್ನು ತಗ್ಗಿಸಿದ್ದಾರೆ. ಹರಿತವಾದ ಟೀಕೆಗಳನ್ನು ಘನತೆಯ ಪರಧಿಯೊಳಗೆ ಮಾಡುವ ಸೌಲಭ್ಯ ಭಾಷೆ ಒದಗಿಸುತ್ತದೆ.

ತಾವು ಯಾರಿಗೂ ಅಂಜುವ ಅಗತ್ಯವಿಲ್ಲವೆಂದು ವಾದ್ರಾ ದಂಪತಿಗಳು ನುಡಿದಿದ್ದಾರೆ. ಅವರು ಕೇವಲ ಕಾನೂನಿಗೆ ಅಂಜಿದರೆ ಸಾಕು. ಕಾನೂನು ಮೀರುವಷ್ಟು ಎತ್ತರಕ್ಕೆ ವಾದ್ರಾ ದಂಪತಿಗಳು ಬೆಳೆದಿಲ್ಲ. ಶ್ರೀಮಂತರು, ಖ್ಯಾತನಾಮರು ಅಥವಾ ಅವರ ಸಂಬಂಧಿಕರು, ಯಾರೇಯಾಗಲಿ, ಕಾನೂನು ಯಾರನ್ನು ಬಿಡುವುದಿಲ್ಲ. ನನ್ನ ಕುಟುಂಬದ ಸದಸ್ಯರು ಪ್ರತಿಸ್ಪರ್ಧಿಯನ್ನು ಇಲಿ ಹಾಗೂ ಹಲ್ಲಿಯೆಂದು ಜರಿದರೆ, ನಾನು ಖಂಡಿತವಾಗಿಯೂ ಚಿಂತೆಗೀಡಾಗುತ್ತೇನೆ.

*********